# ನಿಮ್ಮ ಕೂಗು ಸರ್ಕಾರದ ಗಮನಕ್ಕೆ ಬಂದಿದೆ

## ಶಿರಾಕ್ಕೆ ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಭೇಟಿ; ಧರಣಿ ನಿರತ ರೈತರೊಂದಿಗೆ ಚರ್ಚೆ

• **ಕನ್ನಡಪ್ರಭ ವಾರ್ತೆ** ಶಿರಾ

ಕೊಬ್ಬರಿ ಮತ್ತು ಅಡಕೆಗೆ ಬೆಂಬಲ ಬೆಲೆ ನಿಗಧಿಗೆ ಒತ್ತಾಯಿಸಿ ತಾಲೂಕು ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ತಾಲೂಕು ಕಚೇರಿ ಮುಂದೆ ನಡೆಸುತ್ತಿರುವ ಅನಿದಿಷ್ಟಾವಧಿ ಧರಣಿ ಸತ್ಯಾಗ್ರಹ ಸ್ಥಳಕ್ಕೆ ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಭೇಟಿ ನೀಡಿ ರೈತರೊಂದಿಗೆ ಚರ್ಚಿಸಿದರು.

ರೈತರೊಂದಿಗೆ ಮಾತನಾಡಿದ ಪ್ರಕಾಶ್ ಕಮ್ಮರಡಿ ಅವರು, ನಿಮ್ಮ ಕೂಗು ಸರಕಾರದ ಗಮನಕ್ಕೆ ಬಂದಿದೆ. ಕೃಷಿ ಬೆಲೆ ಆಯೋಗದಿಂದ ರೈತರ ಬೆಳೆಗಳಿಗೆ ವೈಜ್ಞಾನಿಕವಾಗಿ ಬೆಲೆ ನಿಗದಿ ಮಾಡಿದ್ದೇವೆ. ಅಡಕೆ ಮತ್ತು ತೆಂಗು ಬೆಳೆಗಳಿಗೆ ಕೇಂದ್ರ ಸರಕಾರ ಮೊದಲು ಬೆಲೆ ನಿಗದಿ ಮಾಡಬೇಕು. ಆದರೆ ಕೇಂದ್ರ, ಸರಕಾರ ರಾಜ್ಯ ಸರಕಾರದೊಂದಿಗೆ ಸಹಕರಿಸುತ್ತಿಲ್ಲ. ರಾಜ್ಯದಲ್ಲಿ ಕಳೆದ 4 ವರ್ಷಗಳಿಂದಲೂ ಬರ ಆವರಿಸಿದೆ. ರಾಜ್ಯ ಸರಕಾರವು ಕೇಂದ್ರಕ್ಕೆ ₹17,000 ಕೋಟಿ ನಷ್ಟದ ವರದಿಯನ್ನು ಸಲ್ಲಿಸಿ, ಬರ ಪರಿಹಾರವಾಗಿ ₹4,500 ಕೋಟಿ ಹಣಕ್ಕೆ ಕೇಂದ್ರಕ್ಕೆ ಮನವಿ ಸಲ್ಲಸಲಾಗಿದೆ. ಆದರೆ ಕೇಂದ್ರ ಸರಕಾರವು ಕೇವಲ ₹1,700 ಕೋಟಿ ನೀಡಿದೆ ಎಂದರು.



ಶಿರಾ ನಗರದ ತಾಲೂಕು ಕಚೇರಿ ಮುಂಭಾಗ ರೈತರ ಧರಣಿ ಸ್ಥಳಕ್ಕೆ ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಭೇಟಿ ನೀಡಿ ರೈತರೊಂದಿಗೆ ಚರ್ಚಿಸಿದರು.

ರೈತರು ಧರಣಿ ಮಾಡುತ್ತಿರುವುದು ಬಹಳ ದುರಂತ ವಿಚಾರ. ಕೊಬ್ಬರಿ ಬೆಂಬಲ ಬೆಲೆಗೆ ಸಂಬಂಧಿಸಿದಂತೆ ಏನು ಮಾಡಬಹುದು ಎಂಬ ಬಗ್ಗೆ ಸರಕಾರದ ಮಟ್ಟದಲ್ಲಿ ಚರ್ಚಿಸಿದ್ದೇವೆ. ಮುಂದಿನ ಬಾರಿ ಉತ್ತಮ ಬೆಲೆ ನೀಡಲು ಕ್ರಮ ಕೈಗೊಂಡಿದ್ದೇವೆ. ಸದ್ಯ ಕೇಂದ್ರ ಸರಕಾರ ಕ್ವಿಂಟಾಲ್ ಕೊಬ್ಬರಿಗೆ ₹6,240 ಹಣ ನಿಗದಿ ಮಾಡಿದೆ. ಇದಕ್ಕೆ ರಾಜ್ಯ ಸರಕಾರ ₹1,000 ಬೋನಸ್ ನೀಡಿದೆ. ಒಟ್ಟು ₹7,240 ಹಣ ನಿಗದಿಯಾಗಿದ್ದರೂ ಸಹ ಕೊಬ್ಬರಿ ಖರೀದಿ ಆಗುತ್ತಿಲ್ಲ ಎಂದ ಅವರು ಅಡಿಕೆ ಬೆಲೆಗೂ ಸಹ ನಾವು ಕ್ವಿಂಟಾಲ್‌ಗೆ ₹40ಸಾವಿರ ಬೆಲೆ ನಿಗದಿ ಮಾಡಿದ್ದೇವೆ ಎಂದರು.

ಸ್ಥಳದಲ್ಲಿ ಸಹಾಯಕ ಕೃಷಿ ನಿರ್ದೇಶಕ ಡಾ. ನಾಗರಾಜು, ತೋಟಗಾರಿಕಾ ನಿರ್ದೇಶಕ ಶಶಿಧರ್, ಎಪಿಎಂಸಿ ಕಾರ್ಯದರ್ಶಿ ಜಯಣ್ಣ, ಕೃಷಿ ಅಧಿಕಾರಿ ಮಂಜುನಾಥ್, ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಧನಂಜಯರಾಧ್ಯ, ತಾ. ಅಧ್ಯಕ್ಷ ಪರಮಶಿವಯ್ಯ ಇದ್ದರು.